ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 06-03-2017

## ಪತ್ರಿಕಾ ಆಮಂತ್ರಣ

1. ದಲಿತ ವಚನಕಾರರ ಜಯಂತಿ:

ಉದ್ಘಾಟನೆ:
ಶ್ರೀಮತಿ ಉಮಾಶ್ರೀ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
ಮುಖ್ಯ ಅತಿಥಿಗಳು:
ಕೆ.ಜೆ. ಜಾರ್ಜ್,
ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು
ದಿನಾಂಕ: 07-03-2017 ಮಂಗಳವಾರ, ಸಮಯ ಬೆಳಿಗ್ಗೆ 10-45 ಗಂಟೆಗೆ
ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು

2. ಪತ್ರಿಕಾಗೋಷ್ಠಿ:

ಆರ್. ರೋಷನ್ ಬೇಗ್,

ನಗರಾಭಿವೃದ್ಧಿ ಮತ್ತು ಹಜ್ ಸಚಿವರು

ದಿನಾಂಕ: 07-03-2017 ಮಂಗಳವಾರ, ಮಧ್ಯಾಹ್ನ 12.00 ಗಂಟೆಗೆ

ಸ್ಥಳ: ಕೊಠಡಿ ಸಂಖ್ಯೆ: 419, ವಿಕಾಸಸೌಧ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

# ಮುಂದಿನ ಬೇಸಿಗೆಯಲ್ಲಿ ರಾಜ್ಯದಲ್ಲಿ ವಿದ್ಯುತ್ ಕೊರತೆ ಉಂಟಾಗದು

– ಸಚಿವ ಡಿ.ಕೆ. ಶಿವಕುಮಾರ್

ಬೆಂಗಳೂರು, ಮಾರ್ಚ್ 6 , (ಕರ್ನಾಟಕ ವಾರ್ತೆ

ರಾಜ್ಯ ತೀವ್ರ ಬರಗಾಲ ಎದುರಿಸುತ್ತಿದ್ದರೂ ಮುಂದಿನ ಬೇಸಿಗೆಯಲ್ಲೂ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ಕೊರತೆ ಉಂಟಾಗುವುದಿಲ್ಲ ಎಂದು ಇಂಧನ ಸಚಿವ ಡಿ. ಕೆ. ಶಿವಕುಮಾರ್ ಅವರು ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು ವಿದ್ಯುತ್ ಉತ್ಪಾಧನಾ ಕ್ಷೇತ್ರದಲ್ಲಿ ರಾಜ್ಯ ಸ್ವಾವಲಂಬಿಯಾಗಿದ್ದು ಜನರ ಬೇಡಿಕೆಗಿಂತಲೂ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ರಾಜ್ಯದ ಜನರ ಬೇಡಿಕೆ ಈಡೇರಿಸಿ ಸಹ ನಮ್ಮಲ್ಲಿ ಇನ್ನೂ ಒಂದು ಸಾವಿರ ಮೆಗಾ ವ್ಯಾಟ್ ವಿದ್ಯುತ್ ಅನ್ನು ಕೈಗಾರಿಕೆಗಳಿಗೂ ಪೂರೈಸಲು ಸಿದ್ಧವಿರುವುದಾಗಿ ಇಂಧನ ಸಚಿವರು ತಿಳಿಸಿದರು.

ವಿದ್ಯುತ್ ಉತ್ಪಾದನೆ ಪ್ರತಿ ತಿಂಗಳು ಏರಿಕೆಯಾಗುತ್ತಿದೆ, ಫೆಬ್ರವರಿ ತಿಂಗಳಲ್ಲಿ ನಡೆದ ಮಹಾಶಿವರಾತ್ರಿ ಹಬ್ಬದ ದಿನದಂದು ರಾಜ್ಯದ ಇತಿಹಾಸದಲ್ಲೇ ದಾಖಲೆಯಾಗುವಂತಹ 10242 ಮೆಗಾ ವ್ಯಾಟ್ ವಿದ್ಯುತ್ ರಾಜ್ಯದಲ್ಲಿ ಬಳಕೆಯಾಗಿದೆ. ಇಷ್ಟೊಂದು ಬೇಡಿಕೆ ರಾಜ್ಯದಲ್ಲಿ ಪ್ರಥಮವಾಗಿದೆ ಎಂದು ತಿಳಿಸಿದ ಸಚಿವರು ವಿದ್ಯುತ್ ಸರಬರಾಜು ವೆಚ್ಚ ತಗ್ಗಿಸಲು ನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರತಿ ತಾಲ್ಲೂಕಿಗೆ 20 ಮೆಗಾ ವ್ಯಾಟ್ ನಂತೆ ಸ್ಥಳೀಯವಾಗಿ ಉತ್ಪಾದಿಸುವ ಸೋಲಾರ್ ವಿದ್ಯುತ್ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದರು.

ರಾಜ್ಯದ ಸೌರ ವಿದ್ಯುತ್ ನೀತಿ ಕುರಿತಂತೆ ಕೇಂದ್ರ ಸರ್ಕಾರವೇ ಮೆಚ್ಚುಗೆ ವ್ಯಕ್ತಪಡಿಸಿದ್ದು ನಮ್ಮ ರಾಜ್ಯದ ಮಾದರಿಯನ್ನು ಎಲ್ಲಾ ರಾಜ್ಯಗಳಲ್ಲೂ ಅನುಸರಿಸುವಂತೆ ಇತರೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚಿಸಿದೆ ಎಂದು ತಿಳಿಸಿದ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಅವರು ಪಾವಗಡ ತಾಲ್ಲೂಕಿನಲ್ಲಿ ವಿಶ್ವದಲ್ಲೇ ಅತಿದೊಡ್ಡ ಸೋಲಾರ್ ಪಾರ್ಕ್ ನಿರ್ಮಾಣ ಮಾಡಲಾಗುತ್ತಿದೆ. ರಾಜ್ಯ ಸರ್ಕಾರವೇ ಸಂಪೂರ್ಣ ವೆಚ್ಚಭರಿಸಲು ಸಿದ್ದವಿದ್ದರೂ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ಖಾಸಗಿಯವರಿಗೆ ರಾಜ್ಯದ ರೈತರು ಜಮೀನನ್ನು ನೀಡಬಾರದು ಎಂಬ ಕಾರಣ ತಿಳಿಸಿ ಸೌರ ವಿದ್ಯುತ್ ನೀತಿಯನ್ನು ಜಾರಿಗೆ ತಂದಿದ್ದು 2020 ರ ಒಳಗೆ 6 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲು ಹಲವು ಖಾಸಗಿ ಸಂಸ್ಥೆಗಳು ಆಸಕ್ತಿ ತೋರಿವೆ. ಆದರೆ ನಮ್ಮ ಸರ್ಕಾರ ರೈತರ ಹಿತ ಗಮನದಲ್ಲಿಟ್ಟುಕೊಂಡು ರೈತ ಸೌರ ವಿದ್ಯುತ್ ನೀತಿ ಜಾರಿಗೊಳಿಸಿದೆ ಎಂದು ತಿಳಿಸಿದ ಸಚಿವರು ರೈತರ ಜಮೀನನ್ನು ಗುತ್ತಿಗೆ ಪಡೆಯುವ ವಿಚಾರದಲ್ಲಿ ಅತ್ಯಂತ ಪಾರದರ್ಶಕತೆ ತೋರಿಸಲಾಗಿದೆ. ಅರ್ಜಿ ಸಲ್ಲಿಸಲು ರೈತರಿಗೆ 1 ತಿಂಗಳು ಕಾಲಾವಕಾಶ ನೀಡಿ ಅವರಿಗೆ ತರಬೇತಿಯನ್ನು ನೀಡಲಾಗಿದೆ. ಅಲ್ಲದೆ 26 ಸಾವಿರ ರೈತರು 3 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲು ಅರ್ಜಿ ಸಲ್ಲಿಸಿದ್ದರು ಎಂದು ಅವರು ತಿಳಿಸಿದರು.

ಎಂಆರ್‌ಎಂ:ಕೆಪಿಪಿ::ಜಿಪಿಆರ್.

# ಟೀಯೆಸ್ಸಾರ್, ಮೊಹರೆ ಹಣಮಂತರಾಯ ಪ್ರಶಸ್ತಿಗೆ ಆಯ್ಕೆ ಸಮಿತಿ ರಚನೆ

ಬೆಂಗಳೂರು, ಮಾರ್ಚ್ 6 , (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ ಟೀಯೇಸ್ಸಾರ್ ಸ್ಮಾರಕ ಪ್ರಶಸ್ತಿ ಮತ್ತು ಮೊಹರೆ ಹಣಮಂತರಾಯ ಪ್ರಶಸ್ತಿಗೆ 2016 ಸಾಲಿನ ಅರ್ಹ ಪತ್ರಕರ್ತರನ್ನು ಆಯ್ಕೆ ಮಾಡಲು ಸರ್ಕಾರ ನಿವೃತ್ತ ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿದೆ.

ಕನ್ನಡ ಪತ್ರಿಕೋದ್ಯಮದ ಸಾಧಕರನ್ನು ಗೌರವಿಸುವ ಈ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ನೀಡುತ್ತ ಬಂದಿದೆ. 2016 ನೇ ಸಾಲಿನ ಅರ್ಹ ಪತ್ರಕರ್ತರನ್ನು ಆಯ್ಕೆ ಮಾಡಲು ಕರ್ನಾಟಕ ಉಚ್ಛ ನ್ಯಾಯಾಯದ ನಿವೃತ್ತ ನ್ಯಾಯಾಧೀಶರಾದ ಶ್ರೀಮತಿ ಇಂದ್ರಕಲಾ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು ಈ ಸಮಿತಿಯಲ್ಲಿ ಪ್ರಜಾವಾಣಿ ಮುಖ್ಯ ಉಪಸಂಪಾದಕರಾದ ಶ್ರೀಮತಿ ಮಂದಾಕಿನಿ, ಹುಬ್ಬಳ್ಳಿಯ ಕನ್ನಡ ಪ್ರಭ ಪತ್ರಿಕೆಯ ಸ್ಥಾನಿಕ ಸಂಪಾದಕರಾದ ಮಲ್ಲಿಕಾರ್ಜುನ ಸಿದ್ದಣ್ಣ ಹಾಗೂ ಹವ್ಯಾಸಿ ಪತ್ರಕರ್ತರಾದ ಆರ್. ಟಿ. ವಿಠಲಮೂರ್ತಿ ಸದಸ್ಯರಾಗಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಅವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಜಿಡಿ:ಜಿಪಿಆರ್.

## ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಹಾಗೂ ಸ್ತ್ರೀ ಶಕ್ತಿ ಗುಂಪುಗಳಿಗೆ ಪ್ರಶಸ್ತಿ ಘೋಷಣೆ– ಸಚಿವೆ ಉಮಾಶ್ರೀ

ಬೆಂಗಳೂರು. ಮಾರ್ಚ್.6,ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನೀಡಲಾಗುವ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಹಾಗೂ ಅತ್ಯುತ್ತಮ ಸ್ತ್ರೀ ಶಕ್ತಿ ಗುಂಪು ಪ್ರಶಸ್ತಿಗಳಿಗೆ ಅರ್ಹ ವ್ಯಕ್ತಿ ಮತ್ತು ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಹೇಳಿದ್ದಾರೆ.

ಮಹಿಳೆಯರ ಅಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸುತ್ತಿರುವ ಸಂಸ್ಥೆಗಳು ಮತ್ತು ವ್ಯಕ್ತಿಗಳನ್ನು ಪ್ರೋತ್ಸಾಹಿಸಲು ಹಾಗೂ ಕಲೆ, ಕ್ರೀಡೆ, ಸಾಹಿತ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿರುವ ಮಹಿಳೆಯರನ್ನು ಮತ್ತು ಅಸಾಮಾನ್ಯ ಧೈರ್ಯ ಪ್ರದರ್ಶಿಸಿದ ಮಹಿಳೆಯರನ್ನು ಗುರುತಿಸಿ ಪ್ರೋತ್ಸಾಹಿಸಲು 1994-95ನೇ ಸಾಲಿನಿಂದ "ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ"ಗಳನ್ನು ನೀಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ದಿನಾಂಕ 08-03-2017ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಬೆಳಗ್ಗೆ 11.00 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಈ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಮಹಿಳೆಯರು ಉತ್ಪಾದಿಸಿದ ವಸ್ತುಗಳ ಮಾರಾಟ ಮತ್ತು ವಿವಿಧ ಇಲಾಖೆಗಳ ಮಾಹಿತಿ ಮಳಿಗೆಗಳ ಉದ್ಘಾಟನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸಲಿದ್ದಾರೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳ್ಳುವ "ಸಮೃದ್ಧಿ" ಮತ್ತು "ಧನಶ್ರೀ" ಯೋಜನೆಗಳನ್ನು ಲೋಕಾರ್ಪಣೆ ಮಾಡುವ ಮೂಲಕ ಸಾಂಕೇತಿಕವಾಗಿ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸಲಾಗುವುದು ಎಂದು ಸಚಿವೆ ಉಮಾಶ್ರೀ ಹೇಳಿದ್ದಾರೆ.

ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ 8 ವ್ಯಕ್ತಿಗಳಿಗೆ ಮತ್ತು 5 ಸಂಸ್ಥೆಗಳಿಗೆ ಹಾಗೂ ಕಲೆ, ಕ್ರೀಡೆ, ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅವಿರತವಾಗಿ ಸಾಧನೆ ಮಾಡಿರುವ 9 ಸಾಧಕರಿಗೆ ಹಾಗೂ ಸಮಯಪ್ರಜ್ಞೆಯಿಂದ ಜೀವರಕ್ಷಣೆ ಮಾಡಿದ ವೀರಮಹಿಳೆ ಸೇರಿದಂತೆ 2015-2016ನೇ ಸಾಲಿನ "ಕಿತ್ತೂರು ರಾಣಿ ಚೆನ್ನಮ್ಮ" ಪ್ರಶಸ್ತಿಗಳನ್ನು ಪ್ರದಾನ ಮಾಡಿ, ಗೌರವಿಸಲಾಗುತ್ತದೆ. ಒಟ್ಟು 23 ಪ್ರಶಸ್ತಿಗಳು. (ಪ್ರಶಸ್ತಿದಾರರ ಪಟ್ಟಿಯನ್ನು ಲಗತ್ತಿಸಿದೆ)

ಗ್ರಾಮೀಣ ಮಹಿಳೆಯರ ಸರ್ವಾಂಗೀಣ ಸಬಲೀಕರಣಕ್ಕಾಗಿ ರಚಿಸಲಾಗಿರುವ ಸ್ತ್ರೀಶಕ್ತಿ ಗುಂಪುಗಳ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ 3 ಸ್ತ್ರೀಶಕ್ತಿ ಗುಂಪುಗಳಿಗೆ ಹಾಗೂ 3 ಸ್ತ್ರೀಶಕ್ತಿ ಒಕ್ಕೂಟಗಳಿಗೆ ರಾಜ್ಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಇದಲ್ಲದೆ 4 ಕಂದಾಯ ವಿಭಾಗೀಯ ಮಟ್ಟದಲ್ಲಿ ಉತ್ತಮ ಕಾರ್ಯ ನಿರ್ವಹಿಸುತ್ತಿರುವ 4 ಸ್ತ್ರೀ ಶಕ್ತಿ ಗುಂಪುಗಳಿಗೆ ಶ್ರೀಮತಿ ಯಶೋಧರಮ್ಮ ದಾಸಪ್ಪ ಇವರ ಹೆಸರಿನಲ್ಲಿ ರಾಜ್ಯ ಮಟ್ಟದಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಮಹಿಳಾ ಉದ್ದೇಶಿತ ಆಯವ್ಯಯ ಅನುಷ್ಠಾನದಲ್ಲಿ ರಾಜ್ಯದಲ್ಲಿ ವಿವಿಧ ಇಲಾಖೆಗಳಿಂದ ಸೌಲಭ್ಯಗಳನ್ನು ಪಡೆದು ಯಶಸ್ವಿಯಾಗಿ ಜೀವನ ನಿರ್ವಹಿಸುತ್ತಿರುವ ಮಹಿಳೆಯರ ಯಶೋಗಾಥೆಯನ್ನು ಬಿಂಬಿಸುವ "ಸುಕೃತ" ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಸ್ತ್ರೀಶಕ್ತಿ ಗುಂಪಿನ ಮಹಿಳೆಯರು ಹಮ್ಮಿಕೊಂಡಿರುವ ಆದಾಯೋತ್ಪನ್ನ ಚಟುವಟಿಕೆಗಳ ಸಾಧನೆಯನ್ನು ಬಿಂಬಿಸುವ "ಅಂತರಾಳ" ಕಿರುಹೊತ್ತಿಗೆಯ 12ನೇ ಸಂಚಿಕೆಯನ್ನು ಹಾಗೂ ಸ್ತ್ರೀಶಕ್ತಿ ಯೋಜನೆಯ ಕೈಪಿಡಿಯನ್ನು ಬಿಡುಗಡೆ ಮಾಡಲಾಗುತ್ತಿದೆ. ಇದಲ್ಲದೆ ವಿವಿಧ ಸ್ತ್ರೀಶಕ್ತಿ ಗುಂಪಿನ ಮಹಿಳೆಯರು ಸ್ವಯಂ ಉದ್ಯೋಗದಡಿಯಲ್ಲಿ ಆದಾಯೋತ್ಪನ್ನ ಚಟುವಟಿಕೆಗಳನ್ನು ಹಮ್ಮಿಕೊಂಡು ಉತ್ಪಾದಿಸಿದ ಉತ್ಪನ್ನಗಳ ಮಾಹಿತಿ ಕೈಪಿಡಿಯನ್ನು ಹೊರತರಲಾಗುತ್ತಿದೆ.

ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಗಾಗಿ ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದ ಬಾಲಕಿ ಕು. ರೇವತಿ ನಾಯಕ್ ಇವರನ್ನು ಅಭಿನಂದಿಸಲಾಗುವುದು.

ಬಳ್ಳಾರಿ ಜಿಲ್ಲೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟುವಲ್ಲಿ ವಿಶೇಷ ಕಾಳಜಿ ತೆಗೆದು ಸಾಗಾಣಿಕೆಯನ್ನು ತಡೆಗಟ್ಟುವಲ್ಲಿ ಭಾಗಿಯಾದ ಪೋಲೀಸ್ ಅಧಿಕಾರಿ ಪಬ್ಲಿಕ್ ಪ್ರಾಸಿಕ್ಯುಟರ್, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು ಹಾಗೂ ಸ್ವಯಂ ಸೇವಾ ಸಂಸ್ಥೆಯ ಸೇವೆಯನ್ನು ಗುರುತಿಸಿ ಈ ಸಂದರ್ಭದಲ್ಲಿ ಅಭಿನಂದಿಸಲಾಗುವುದು.

ಮಹಿಳಾ ದಿನಾಚರಣೆಯ ಅಂಗವಾಗಿ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರಿಗಾಗಿ ಕ್ರೀಡಾಕೂಟವನ್ನು ಹಮ್ಮಿಕೊಂಡಿದ್ದು ರಾಜ್ಯಮಟ್ಟದಲ್ಲಿ ವಿಜೇತರಾದವರಿಗೆ ಬಹುಮಾನವನ್ನು ನೀಡಲಾಗುವುದು.

ಮಹಿಳಾ ದಿನಾಚರಣೆಯ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸದರಿ ದಿನದಂದು ಪೂರ್ಣವಾಗಿ ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

## 1. ಮಹಿಳಾ ಅಭಿವೃದ್ಧಿಗಾಗಿ ಶ್ರಮಿಸಿದ ಉತ್ತಮ ಸಂಸ್ಥೆಗಳು

| | | |
|---|---|---|
| 1. | ಚಿಕ್ಕಬಳ್ಳಾಪುರ ಜಿಲ್ಲೆ | ಆಕ್ಷನ್ ಫಾರ್ ಸೋಶಿಯಲ್ ಅಂಡ್ ಎಜುಕೇಷನಲ್ ಡೆವೆಲಪ್‌ಮೆಂಟ್ ಅಸೋಸಿಯೇಷನ್, ಶಿವಾ ನಿಲಯ ಕೋಟೆ, ಗೌರಿಬಿದನೂರು, ಚಿಕ್ಕಬಳ್ಳಾಪುರ. |
| 2. | ಶಿವಮೊಗ್ಗ ಜಿಲ್ಲೆ | ಚರಕ ಮಹಿಳಾ ವಿವಿಧೋದ್ಧೇಶ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಭೀಮನ ಕೋಣೆ, ಸಾಗರ. |
| 3. | ಚಿಕ್ಕಮಗಳೂರು ಜಿಲ್ಲೆ | ಕನಕ ಶ್ರೀ ಮಹಿಳಾ ಸಂಘ, 2ನೇ ಕ್ರಾಸ್, ಲಕ್ಷ್ಮೀ ನಗರ , ಕಡೂರು , ಚಿಕ್ಕಮಗಳೂರು . |
| 4. | ಗದಗ ಜಿಲ್ಲೆ | ಸರ್ವೋದಯ ಮಹಿಳಾ ಮಂಡಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಸಂಸ್ಥೆ, ಡಂಬಳ, ಮುಂಡರಗಿ , ಗದಗ. |
| 5. | ಬಳ್ಳಾರಿ ಜಿಲ್ಲೆ | ಪ್ರಗತಿ ಸಮಾಜ ಸೇವಾ ಸಂಸ್ಥೆ, ಲಕ್ಷ್ಮೀವೆಂಕಟೇಶ್ವರ ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರುಗಡೆ, ಆದೋನಿ ರಸ್ತೆ, ಸಿರುಗುಪ್ಪ, ಬಳ್ಳಾರಿ. |

## 2. ಮಹಿಳಾ ಅಭಿವೃದ್ಧಿಗಾಗಿ ಶ್ರಮಿಸಿದ ವ್ಯಕ್ತಿಗಳು

| ಕ್ರ.ಸಂ | ಜಿಲ್ಲೆಯ ಹೆಸರು | ವ್ಯಕ್ತಿಯ ಹೆಸರು |
|---|---|---|
| 1. | ಬೆಂಗಳೂರು ನಗರ ಜಿಲ್ಲೆ | ಮಧುರಾ ಅಶೋಕ್ ಕುಮಾರ್, ಶ್ರೀಗಂಧ, ನಂ.676, 6ನೇ ಮುಖ್ಯ ರಸ್ತೆ, ಅಡ್ಡ ರಸ್ತೆ, ವಿಜಯನಗರ, ಬೆಂ–560040 |
| 2. | | ಡಾ. ಪದ್ಮಿನಿ ಪ್ರಸಾದ್(ಎಂ.ಬಿ.ಬಿ.ಎಸ್)ಎಂ.ಡಿ, ರಮಾಮಣಿ ನರ್ಸಿಂಗ್ ಮತ್ತು ಮೆಟರ್ನಿಟಿ ಹೊಮ್ ಮತ್ತು ಇನ್ಸಿಟ್ಯೂಟ್ ಆಫ್ ಸೆಕ್ಸುಯಲ್ ಮೆಡಿಸನ್, 212,57ನೇ ಅಡ್ಡರಸ್ತೆ, ರಾಮಮಂದಿರ ಆಟದ ಮೈದಾನದ ಎದುರು, 4ನೇ ವಿಭಾಗ ರಾಜಾಜಿನಗರ, ಬೆಂಗಳೂರು–560010 |
| 3. | | ಸೌಭಾಗ್ಯ ಈಶ್ವರಯ್ಯ, ನಂ.16, 15ನೇ ಅಡ್ಡ ರಸ್ತೆ, 3ನೇ ದೇವಸ್ಥಾನದ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 |

| | | |
|---|---|---|
| **4.** | **ಕೋಲಾರ ಜಿಲ್ಲೆ** | ಕೆ.ಎಸ್. ನಾಗವೇಣಿ, ಸೋಮೇನಹಳ್ಳಿ, ವಕ್ಕ ಲೇರಿ ಅಂಚೆ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. |
| **5.** | ಚಿತ್ರದುರ್ಗ ಜಿಲ್ಲೆ | ಡಿ.ಎಸ್. ಕೋಕಿಲಾ, ಕಾರ್ಯದರ್ಶಿ, ಶ್ರೇಯಸ್ ಮಹಿಳಾ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸೇವಾ ಸಂಸ್ಥೆ(ರಿ), ಜೋಗಿಮಟ್ಟಿ ಮುಖ್ಯ ರಸ್ತೆ, ಮಾರುತಿ ಬಾರ್ ಎದುರು, ಚಿತ್ರದುರ್ಗ–577501. |
| **6.** | **ತುಮಕೂರು ಜಿಲ್ಲೆ.** | ಸಿ. **ಲಲಿತಾ ಮಲ್ಲಪ್ಪ, ಕೋಂ ಎಸ್.ಬಿ. ಮಲ್ಲಪ್ಪ, ಚೇತನ ನಿಲಯ, ಮನೆ ನಂ.653, 9 ನೇ ಕ್ರಾಸ್, ಎಸ್.ಐ.ಟಿ. ಬಡಾವಣೆ, ತುಮಕೂರು.** |
| **7.** | **ದಾವಣಗೆರೆ ಜಿಲ್ಲೆ** | **ಉಮಾ ವೀರಭದ್ರಪ್ಪ, ಕೋಂ.ಲೇ. ವೀರಭದ್ರಪ್ಪ, ಮನೆ ನಂ.173/2, ಜೈನ ಮಂದಿರದ ಎದುರು, ನರಸರಾಜ ಪೇಟೆ, ದಾವಣಗೆರೆ,** |
| **8.** | **ಕಲ್ಬುರ್ಗಿ ಜಿಲ್ಲೆ** | **ಯುಗಾಂತ್ರಿ.ಎ. ದೇಶಮಾನ್ಯೆ, ಪ್ಲಾಟ್ ನಂ.21–22, ರತ್ನಾ ಕಾಟೇಜ್, ಬಾಪೂನಗರ, ಕಲ್ಬುರ್ಗಿ ಜಿಲ್ಲೆ** |

### 3. ಕಲಾ ಕ್ಷೇತ್ರ

| ಕ್ರ.ಸಂ | ಜಿಲ್ಲೆಯ ಹೆಸರು | ವ್ಯಕ್ತಿಯ ಹೆಸರು ಶ್ರೀಮತಿ |
|---|---|---|
| 1. | ಬೆಂಗಳೂರು ನಗರ ಜಿಲ್ಲೆ | ಡಾ॥ ಸುಪರ್ಣಾ ರವಿಶಂಕರ್, ನಂ.25, 1ನೇ ಅಡ್ಡ ರಸ್ತೆ, ಅನ್ನಪೂರ್ಣೇಶ್ವರಿ ಲೇಔಟ್, ವೀರಭದ್ರ ನಗರ ಬನಶಂಕರಿ, 3ನೇ ಹಂತ, ಬೆಂಗಳೂರು. |
| 2. | | ಶ್ರೀಮತಿ ವೃಂದಾ ಎಸ್. ರಾವ್, ನಂ.11, 5ನೇ ಅಡ್ಡ ರಸ್ತೆ, ಸುಪ್ರಜಾ ನಗರ, ಕೋಣನ ಕುಂಟೆ, ಬೆಂಗಳೂರು. |
| 3. | | ಶಾಂತಿ ವಾಸು, ನಂ.28, 2ನೇ ಮುಖ್ಯ ರಸ್ತೆ, 1ನೇ ಅಡ್ಡ ರಸ್ತೆ, ಮೈಕೋ ಲೇಔಟ್, ಮಹಾಲಕ್ಷ್ಮೀಪುರ, ಬೆಂಗಳೂರು–86. |
| 4 | ಬಾಗಲಕೋಟೆ ಜಿಲ್ಲೆ | ಪ್ರೇಮಾ ಬಸವರಾಜ ಪಾಟೀಲ, ಕೇರಾಫ್ ಲಾಯಕ ಗುಂಡಿ ರೋಡ್, ಶ್ರೀ ಸಂಗಮೇಶ್ವರ ನಾಟ್ಯ ಸಂಘ (ದರಿ), ಆಶಾಪೂರ ತಾ, ಬಾದಾಮಿ ಜಿಲ್ಲೆ, ಬಾಗಲಕೋಟೆ. |
| 5. | ಹಾಸನ ಜಿಲ್ಲೆ | ರೋಹಿಣಿ ಅನಂತ್, ನಂ.226,12ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ವೈಯಾಲಿಕಾವಲ್, ಬೆಂಗಳೂರು – 03 |

### 4. ಸಾಹಿತ್ಯ ಕ್ಷೇತ್ರ

| ಕ್ರ.ಸಂ | ಜಿಲ್ಲೆಯ ಹೆಸರು | ವ್ಯಕ್ತಿಯ ಹೆಸರು ಶ್ರೀಮತಿ |
|---|---|---|
| 1. | ಬೆಂಗಳೂರು ಜಿಲ್ಲೆ | .ಎ.ಜಿ.ರತ್ನ ಕಾಳೇಗೌಡ ನಂ29, 1ನೇ ಮೈನ್, ಬೆಸ್ಟ್ ಕೌಂಟ್–2, ಎಂಎಸ್, ಪಾಳ್ಯ, ವಿದ್ಯಾರಣ್ಯ ಪುರ ಪೋಸ್ಟ್, ಬೆಂಗಳೂರು. |
| 2 | ಮಂಡ್ಯ ಜಿಲ್ಲೆ | ಡಾ॥ ಸುಶೀಲ ಹೊನ್ನೇಗೌಡ, ನಂ,2985, "ಪೂರ್ಣ ಚಂದ್ರ" ನೆಹರುನಗರ ಮಂಡ್ಯ. |

### 5. ಕ್ರೀಡಾ ಕ್ಷೇತ್ರ

| ಕ್ರ.ಸಂ | ಜಿಲ್ಲೆಯ ಹೆಸರು | ವ್ಯಕ್ತಿಯ ಹೆಸರು ಶ್ರೀಮತಿ |
|---|---|---|
| 1. | ಹಾಸನ ಜಿಲ್ಲೆ | ಪುಷ್ಪಾ. ಹೆಚ್.ಕೆ. ನಂ.5661/1, 3ನೇ ಅಡ್ಡ ರಸ್ತೆ, ಮಹಿಳಾ ಒಕ್ಕಲಿಗರ ಹಾಸ್ಟೆಲ್ ಎದುರಿಗೆ, |

| | | |
|---|---|---|
| | | ರವೀಂದ್ರನಗರ, ಹಾಸನ. |

**6. ಶಿಕ್ಷಣ ಕ್ಷೇತ್ರ**

| ಕ್ರ.ಸಂ | ಜಿಲ್ಲೆಯ ಹೆಸರು | ವ್ಯಕ್ತಿಯ ಹೆಸರು ಶ್ರೀಮತಿ |
|---|---|---|
| 1 | ವಿಜಯಪುರ | ಭುವನೇಶ್ವರಿ ಚಂದ್ರಶೇಖರಯ್ಯ ಮೇಲಿನಮಠ,<br>ನಂ,51, ಗುರುರಾಜ ಕಾಲೋನಿ, ಆಶ್ರಮ ರಸ್ತೆ, ವಿಜಯಪುರ. |

**7. ವೀರ ಮಹಿಳೆ**

| ಕ್ರ.ಸಂ | ಜಿಲ್ಲೆಯ ಹೆಸರು | ವ್ಯಕ್ತಿಯ ಹೆಸರು ಶ್ರೀಮತಿ |
|---|---|---|
| 1. | ಹಾಸನ ಜಿಲ್ಲೆ | ಡಿ.ಎನ್.ಕೃಪಾ, ಬಿನ್ ನಾಗಣ್ಣ,<br>ಗಣೇಶ್ ನಗರ್,<br>ಚನ್ನರಾಯ ಪಟ್ಟಣ ತಾ, ಹಾಸನ ಜಿಲ್ಲೆ. |

## ರಾಜ್ಯಮಟ್ಟದ ಅತ್ಯುತ್ತಮ ಪ್ರಶಸ್ತಿಗಾಗಿ ಆಯ್ಕೆ ಮಾಡಿರುವ ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳು:

**1.** ಶ್ರೀ ಕರೇನಳ್ಳಮ್ಮ ಸ್ತ್ರೀಶಕ್ತಿ ಗುಂಪು, ಮಹದೇವಪುರ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

**2.** ಶ್ರೀ ಕಲ್ಲಾಳಮ್ಮ ಸ್ತ್ರೀಶಕ್ತಿ ಗುಂಪು, ಮಾವಿನತೋಪು, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.

**3.** ಶ್ರೀ ಅಂಬಾಭವಾನಿ ಸ್ತ್ರೀಶಕ್ತಿ ಗುಂಪು, ಹಡಗಲಿ, ವಿಜಯಪುರ ತಾಲ್ಲೂಕು, ವಿಜಯಪುರ ಜಿಲ್ಲೆ.

## ಶ್ರೀಮತಿ ಯಶೋಧರಮ್ಮ ದಾಸಪ್ಪ ವಿಭಾಗೀಯ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಿರುವ ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳು

**1.** ಶ್ರೀ ಲಕ್ಷ್ಮೀ ಸ್ತ್ರೀಶಕ್ತಿ ಗುಂಪು, ಚಿಕ್ಕಬ್ಯಾಲಕೆರೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

**2.** ಲಕ್ಷ್ಮೀದೇವಿ ಸ್ತ್ರೀಶಕ್ತಿ ಗುಂಪು, ಕುಪ್ಪೆ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ.

**3.** ಶ್ರೀ ಲಕ್ಷ್ಮೀದೇವಿ ಸ್ತ್ರೀಶಕ್ತಿ ಗುಂಪು, ಹಳಿಂಗಳಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

**4.** ಭವಾನಿ ಸ್ತ್ರೀಶಕ್ತಿ ಗುಂಪು, ಬೆಳಮಗಿ, ಆಳಂದ ತಾಲ್ಲೂಕು, ಕಲಬುರ್ಗಿ ಜಿಲ್ಲೆ.

## ಅತ್ಯುತ್ತಮ ತಾಲ್ಲೂಕು ಒಕ್ಕೂಟ ಪ್ರಶಸ್ತಿಗೆ ಆಯ್ಕೆ ಮಾಡಿರುವ ತಾಲ್ಲೂಕು ಒಕ್ಕೂಟಗಳು:

**1.** ಗುಬ್ಬಿ ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟ, ತುಮಕೂರು ಜಿಲ್ಲೆ

**2.** ಬೆಳ್ತಂಗಡಿ ತಾಲ್ಲೂಕು, ಸ್ತ್ರೀಶಕ್ತಿ ಒಕ್ಕೂಟ, ದಕ್ಷಿಣ ಕನ್ನಡ ಜಿಲ್ಲೆ

**3.** ಶಹಪುರ ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟ, ಯಾದಗಿರಿ ಜಿಲ್ಲೆ

# Press Note

International Women's Day is being celebrated by the Department of Women and Child Development, from the year 1994-95, Kittur Rani Chennamma Awards are being given to encourage Institutions and Individuals who have done exemplary services in the field of women Development and women who have done extraordinary achievement in the fields of Art, Sports, Literature, Education and Veera Mahile award is being given to woman who have shown extraordinary courage.

**International Women's Day programme for the year 2016-2017 will be held on 8th March 2017 at Raveendra Kalakshetra, J.C.Road, Bengaluru, at 11.00 a.m. Hon'ble Chief Minister will inaugurate the function and the exhibition stalls.**

On this occasion, the new scheme "Samrudhi" and "Dhanashree" which will be implemented by Katnataka State Women Development Corporation will be dedicated to the State by distributing the facilities in token to the beneficiaries.

Kittur Rani Chennamma Awards will be conferred to 5 Institutions and 8 Individuals who have rendered their services for the development of women. Awards are also given to the women who have done outstanding achievements in the field of Art, Sports, Education, Literature and 1 for women who has shown exemplary bravery, altogether 23 Awards is being given.(awardees list enclosed).

In order to encourage the Streeshakthi Groups formed to empower the rural women, State Level Awards will be given to 3 best performing groups and 3 taluk federations, and in each revenue division 4 Streeshakthi groups are felicitated by Smt.Yashodharamma Dasappa award.(awardees list enclosed).

A book on the success stories of women beneficiaries on the implementation of Gender Budget in State “Sukrutha” will be released.

"Antharala-12", a book reflecting the achievements of income generating activities of Streeshakthi Groups. and a catalogue of products produced by the Streeshakthi groups is also being released.

Kum.Revathy Nayak, who was awarded National Award for exceptional talent in the field of sports will be felicitated.

A team of officers consisting thethen Police Officers, Public Prosecutor, Child Welfare Committee Chair person and NGOs involved in preventing trafficking of women and children in Bellary District will be felicitated.

Taluk and District level sports are conducted on the occasion of International Women’s Day and for winners, State level sports meet was conducted and the winners at the state level will be awarded prizes.

A day long cultural programme will be held at Raveendra Kalakshetra on the occasion of International Womens Day in co-ordination with the department of Kannada and Culture and by NGOs.

## I Field : **Women Development : Institutional Awards**

| Sl No | Name of the District | Organisations |
|---|---|---|
| 1 | Chikballapur | Action for Social and educational development association, Shivanilaya Fort, Gowribidanur, Chikkaballapur. |
| 2 | Shimoga | Charaka women multipurpose industrial co-operative society (ltd),Bhimankone, Sagar |
| 3 | Chikkamagalur | Kanakashri Mahila Society, 2nd cross, Lakshminagar , Kadur, Chikkamagalur. |
| 4 | Gadag | Sarvodaya Women Board Scheduled caste and Scheduled tribe development Society , Dambala, Mundargi, Gadag. |
| 5 | Bellary | Pragati Social Service Society, Lakshmivenkateshwara Complex, Adoni Road,Siraguppa, Bellary |

## II. Women Development : Individual

| Sl No | Name of the District | Individuals |
|---|---|---|
| 1 | Bangalore Urban | Smt.Madhura Ashok Kumar, Shreegandha, No.676, 7th mainroad, Vijayanagar, Bangalore . |
| 2 | | Dr.Padmini Prasad, Ramamani Nursing and Maternity Home, Institute of sexual medicines ,no.212, 57th cross road, 4 th block, Rajajinagar, Bangalore . |
| 3 | | Smt.Sowbhagya Eshwaraiah, No.16, 15th cross, 3rd temple road, Malleshwaram, Bangalore. |
| 4 | Kolar | Smt.K.S.Nagaveni, Somenahalli, Vakkaleri Post, Kolar |
| 5 | Chitradurga | Smt.D.S.Kokila, Shreyas Women Urban and Rural Development Serivice Society, ®, Jogimatti main road, Chitradurga. |
| 6 | Tumkur | Smt.C.Lalitha Mallappa, W/o.S.P.Mallappa,'Chetana Nilaya' House No.653, 9th cross, SIT Extension, Tumkur. |

| | | |
|---|---|---|
| 7 | Davanagere | Smt.Uma Veerabhadrappa,<br>w/o.late Veerabhadrappa, No.173/2,<br>front of Jain mandir, Narasaraj pet,<br>Davanagere. |
| 8 | Kalburgi | Smt.Yugantri A.Deshamane,<br>Plot No. 21-22, Ratna Cottage,<br>Bapunagar, Kalburgi |

## III. ARTS

| Sl No | Name of the District | Individuals |
|---|---|---|
| 1 | Bangalore Urban | Dr.Suparna Ravishankar,<br>No.25, Ist cross, Annapurneshwari Layout, Veerabhadranagar,<br>Banashankari III Stage, Bangalore. |
| 2 | | Smt.Vrunda S.Rao,<br>No.11, 4th cross, Supraja Nagar,<br>Konanakunte, Bangalore |
| 3 | | Smt. ShantiVasu,<br>No.28, II main, 1st cross, Mico Layout,<br>Mahalakshmipura, Bangalore -86 |
| 4 | Bagalkote | Smt.Prema Basavaraj Patil,<br>Sri Sangameshwara Natya Sangha,<br>Layak gundi road, Ashapura, Badami,<br>Bagalkote |
| 5 | Hassan | Smt.Rohini Ananth,<br>No.226, 12th cross road,4th main,<br>Vayalikaval, Bangalore – 3. |

## IV. LITERATURE

| Sl No | Name of the District | Individuals |
|---|---|---|
| 1 | Bangalore Urban | Smt.A.J.RatnaKalegowda,<br>No.29, 1st main, west count -2,<br>M.S.Palya, Vidyaranyapura post,<br>Bangalore |

| | | |
|---|---|---|
| 2 | Mandya | Dr.Sushila Honnegowda, No.2985, Purnachandra, Nehru Nagar, Mandya |

## V.SPORTS

| Sl No | Name of the District | Individuals |
|---|---|---|
| 1 | Hassan | Smt.H.K.Pushpa, No.5661/1, 3rd cross road, front of women Okkaligara Hostel, Ravindra Nagar, Hassan |

## VI. EDUCATION

| Sl No | Name of the District | Individuals |
|---|---|---|
| 1 | Vijayapura | Smt.Bhuvaneshwari Chandrashekaraiah Melinmutt, No.51, Gururaja Colony, Ashram Road, Vijayapura |

## VII BRAVERY

| Sl No | Name of the District | Individuals |
|---|---|---|
| 1 | Hassan | Smt.D.N.Krupa d/o Naganna, Ganeshnagar, Channarayapatna, Hassan |

# ANNEXURE-2

## Best Streeshakthi Groups selected for the State level Award

1. Sri Karenallamma Streeshakthi Group, Mahadevapura, Nelamangala Taluk, Bengaluru Rural District.
2. Sri Kallalamma Streeshakthi Group, Mavinatopu, Tipaturu Taluku, Tumakuru District.
3. Sri. Ambabhavani Streeshakthi Group, Hadagali, Vijayapura Taluk, Vijayapura District

## Best Streeshakthi Groups selected for the Smt. Yashodharamma Dasappa Divisional level Award

1. Sri Lakshmi Streeshakthi Group, Chikkabyalakere, Bengaluru North Taluk, Bengaluru Urban District.
2. Lakshmidevi Streeshakthi Group, Kuppe, K.R.nagara Taluk, Mysuru District.
3. Sri Lakshmidevi Streeshakthi Group, Halingali, Jamakhandi Taluk, Bagalakote District
4. Bhavani Streeshakthi Group, Belamagi, Alanda Taluk, Kalburgi District.

## Taluk Federation selected for the Best Taluk Federation Award

1. Gubbi Taluk Streeshakthi Federation, Tumakuru District.
2. Belthangadi Taluk Streeshakthi Federation, Dakshina Kannada District.
3. Shahapura Taluk Streeshakthi Federation, Yadagiri District